# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಸಿ.ಸಿ ನಂ.733-2019** **ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ರವಿಶಂಕರ್<br>ದೇಬೂರು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 29-12-2023.** |

**ಮುಂದುವರೆದ ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಸಿ.ಎಂ.ಜೆ ವಕೀಲರಿಂದಃ**

4. ಪಿರ್ಯಾದಿದಾರರಿಗೆ ಮಾಹೇಯಾನ ಸುಮಾರು ರೂ.2,50,000/- ಆದಾಯ ಬಾಡಿಗೆಯಿಂದ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು 2009 ರಲ್ಲಿ ರಸಗೊಬ್ಬರದ ವ್ಯಾಪಾರವನ್ನು ಶುರುಮಾಡಿದ್ದು, ಆದರೆ ಅದನ್ನು ಮುಂದುವರೆಸಲು ಸಾಧ್ಯವಾಗಲಿಲ್ಲ. ಲಕ್ಷ್ಮೀ ಆಗ್ರೋ ಏಜನ್ಸಿ ಯೂ ಪಿರ್ಯಾದಿದಾರರ ಹೆಸರಿನಲ್ಲಿ ಇರುತ್ತದೆ ಎಂದರೆ ಇರಬಹುದು. ರಸಗೊಬ್ಬರದ ವ್ಯಾಪಾರವನ್ನು ನಡೆಸುತ್ತಿದ್ದ ಸಮಯ ನನ್ನ ಮತ್ತು ಪಿರ್ಯಾದಿದಾರರ ನಡುವೆ ಯಾವುದೇ ಪಾಲುದಾರಿಕೆಯ ಒಪ್ಪಂದ ಆಗಿರಲಿಲ್ಲ. ರಸಗೊಬ್ಬರದ ವ್ಯಾಪಾರದಿಂದ ನನ್ನ ಹಾಗೂ ಪಿರ್ಯಾದಿದಾರರ ನಡುವಿನ ಸಂಬಂಧ ಕೆಟ್ಟಿರಲಿಲ್ಲ, ಸಾಕ್ಷಿ ಮುಂದುವರೆದು ಆದರೆ ನನಗೂ ಪಿರ್ಯಾದಿದಾರರ ನಡುವೆ ಸರಿ ಬರಲಿಲ್ಲ ಎಂದು ನುಡಿಯುತ್ತಾರೆ. ನಿಮಗೂ ಮತ್ತು ಪಿರ್ಯಾದಿದಾರರಿಗೂ ಯಾವ ವಿಷಯಕ್ಕೆ ಸರಿ ಬರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನನಗೂ ಮತ್ತು ಪಿರ್ಯಾದಿದಾರರಿಗೂ ಹೊಂದಾಣಿಕೆ ಆಗಲಿಲ್ಲ ಎಂದು ನುಡಿಯುತ್ತಾರೆ. ರಸಗೊಬ್ಬರದ ವ್ಯಾಪಾರವನ್ನು ನಾನು ಬಿಟ್ಟ ನಂತರವೂ ಪಿರ್ಯಾದಿದಾರರು ಮುಂದುವರೆಸಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. 2009 ರಲ್ಲಿ ನಾನು ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯಿಂದ ಸಾಲವನ್ನು ಪಡೆದಾಗ ಪಿರ್ಯಾದಿದಾರರು ನನಗೆ ಮತ್ತು ನನ್ನ ಪತ್ನಿಗೆ ಜಾಮೀನುದಾರರಾಗಿದ್ದರು ಎಂದರೆ ಸರಿ. ನಾನು ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯಿಂದ 2010, 2011, 2012 ಮತ್ತು 2014 ರಲ್ಲಿ ಸಾಲ

ಪಡೆದಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಟ್ಟಡ ನಿರ್ಮಾಣಕ್ಕಾಗಿ ಹಂತ–ಹಂತವಾಗಿ ಸಾಲ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಸಾಲವನ್ನು ಪಡೆದಾಗ ಎಸ್.ಶಿವಕುಮಾರ್, ಮದನ್‌ರಾಜ್ ಮತ್ತು ಕೃಷ್ಣಮೂರ್ತಿ ರವರು ಜಾಮೀನುದಾರರಾಗಿದ್ದರು ಎಂದರೆ ಸರಿ. 2009 ರಿಂದ 2014 ರ ಅವಧಿಯಲ್ಲಿ ನಾನು ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯಿಂದ ಪಡೆದ ಸಾಲದ ಮೊತ್ತ 92 ಲಕ್ಷ ರೂಪಾಯಿಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವೆರು 91 ಲಕ್ಷ ರೂಪಾಯಿಗಳು ಎಂದು ನುಡಿಯುತ್ತಾರೆ. ನಾನು ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯಿಂದ ಸಾಲ ಪಡೆಯಲು ಹುಲ್ಲಹಳ್ಳಿ ರಸ್ತೆಯಲ್ಲಿರುವ ನನ್ನ ಮತ್ತು ನನ್ನ ಪತ್ನಿಯವರ ಮಾಲೀಕತ್ವಕ್ಕೆ ಒಳಪಟ್ಟ ಸ್ವತ್ತನ್ನು ಆಧಾರವಾಗಿ ಇಡಲಾಗಿತ್ತು ಎಂದರೆ ಸರಿ.

6. ಪಿರ್ಯಾದಿದಾರರು ಕಟ್ಟಡವನ್ನು ಕಟ್ಟುವ ಕೆಲಸವನ್ನು ಸಹ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ದೇಬೂರು ಗ್ರಾಮದಲ್ಲಿ ಇಟ್ಟಿಗೆ ಫ್ಯಾಕ್ಟರಿ, ಕೋಳಿ ಸಾಕಾಣಿಕೆ, ಕುರಿ ಮತ್ತು ಹಸು ಸಾಕಾಣಿಕಾ ಘಟಕವನ್ನು ಹೊಂದಿದ್ದು ಜೊತೆಗೆ ವ್ಯವಸಾಯ ಮತ್ತು ರೇಷ್ಮೆ ಬೆಳೆಯನ್ನು ಸಹ ಬೆಳೆಯುತ್ತಿದ್ದೆನು. ನಾನು ನನ್ನ ಇಟ್ಟಿಗೆ ಫ್ಯಾಕ್ಟರಿಯಿಂದ ಪಿರ್ಯಾದಿದಾರರ ಕಟ್ಟಡ ಕಾಮಗಾರಿಗೆ ಇಟ್ಟಿಗೆಗಳನ್ನು ಸರಬರಾಜು ಮಾಡುತ್ತಿದ್ದೆನು ಎಂದರೆ ಸರಿಯಲ್ಲ. 2018 ನೇ ಸಾಲಿನಲ್ಲಿ ನಾನು ವ್ಯಾಪಾರದಲ್ಲಿ ನಷ್ಟ ಹೊಂದಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಸಮಯ ನಾನು ಅನಾರೋಗ್ಯ ಪೀಡಿತನಾಗಿದ್ದೆನು ಎಂದು ನುಡಿಯುತ್ತಾರೆ. ನೀವು ಅನಾರೋಗ್ಯಕ್ಕೆ ತುತ್ತಾಗಿದ್ದರಿಂದ ದೇಬೂರಿನ ವ್ಯವಹಾರಗಳನ್ನು ನಿಲ್ಲಿಸಿದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನನಗೆ ಮೈಸೂರಿನ ಅಗ್ರಹಾರದಲ್ಲಿ ಆಸ್ತಿ ಇತ್ತು ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಾನು ಪಿ.ಜಿ ನಡೆಸುತ್ತಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಿ.ಜಿ ನಡೆಸುವವರಿಗೆ ಬಾಡಿಗೆಗೆ ನೀಡಿದ್ದೆನು ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಅನಾರೋಗ್ಯದಿಂದ ನನ್ನ ವ್ಯವಹಾರಗಳನ್ನು ನಿಲ್ಲಿಸಿರುವುದಿಲ್ಲ, ವ್ಯವಹಾರದಿಂದ ನನಗಾದ ನಷ್ಟದಿಂದ ವ್ಯವಾಹರವನ್ನು ನಿಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2018 ರ ವೇಳೆಗೆ ನಾನು ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯಿಂದ ಪಡೆದಿದ್ದ ಸಾಲ ಸಂಪೂರ್ಣವಾಗಿ ತೀರುವಳಿ ಆಗಿರಲಿಲ್ಲ ಎಂದರೆ ಸರಿ. ನಾನು ಸಾಲವನ್ನು ತೀರುವಳಿಮಾಡದೇ ಇದ್ದ ಕಾರಣ ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯವರು ನನ್ನ ಆಸ್ತಿಯನ್ನು ಮುಟ್ಟುಗೋಲು ಮಾಡಿಕೊಂಡು ನೋಟಿಸ್ ಅನ್ನು ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಮೈಸೂರಿನ ಅಗ್ರಹಾರದಲ್ಲಿ ಇರುವ ಆಸ್ತಿ ಹಾಗೂ ದೇಬೂರಿನ ಆಸ್ತಿಗಳ

ಮೇಲೆಯೂ ಸಹ ನಾನು ಸಾಲ ಪಡೆದಿದ್ದೆನು ಎಂದರೆ ಸರಿ. ನಾನು ಆಸ್ತಿಗಳ ಮೇಲೆ ತೆಗೆದುಕೊಂಡಿದ್ದ ಸಾಲ ತೀರುವಳಿ ಆಗಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಇನ್ನು 3 ವರ್ಷಗಳ ಅವಧಿ ಇತ್ತು ಎಂದು ನುಡಿಯುತ್ತಾರೆ. 2018 ನೇ ಸಾಲಿನಲ್ಲಿ ನಾನು ಮಾಡಿದ್ದ ಸಾಲಗಳನ್ನು ತೀರುವಳಿ ಮಾಡುವ ಉದ್ದೇಶದಿಂದ ನಂಜನಗೂಡಿನ ಹುಲ್ಲಹಳ್ಳಿ ರಸ್ತೆಯಲ್ಲಿರುವ ಆಸ್ತಿ ದೇಬೂರಿನಲ್ಲಿರುವ ಆಸ್ತಿ ಹಾಗೂ ಮೈಸೂರಿನ ಅಗ್ರಹಾರದಲ್ಲಿ ಇದ್ದ ಆಸ್ತಿಯನ್ನು ಮಾರಾಟಕ್ಕೆ ಇಟ್ಟಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೈಸೂರಿನಲ್ಲಿ ಇದ್ದ ಆಸ್ತಿಯನ್ನು ಮಾರಾಟ ಮಾಡಿ ಅದರ ಮೇಲೆ ಮಾಡಿದ್ದ ಸಾಲವನ್ನು ತೀರುವಳಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಮೈಸೂರಿನಲ್ಲಿ ಇದ್ದ ಆಸ್ತಿಯನ್ನು 2018-19 ನೇ ಸಾಲಿನಲ್ಲಿ ಮಾರಾಟ ಮಾಡಿರಬಹುದು ಆದರೆ ಯಾವ ವರ್ಷದಲ್ಲಿ ಮಾರಾಟ ಮಾಡಿದೆ ಎಂದು ನನಗೆ ನಿಖರವಾಗಿ ಹೇಳಲು ನನಗೆ ನೆನಪಿರುವುದಿಲ್ಲ, ಮುಂದಿನ ಮುದ್ದತಿಗೆ ನೋಡಿ ಬಂದು ಹೇಳುತ್ತೇನೆ ಎಂದು ನುಡಿಯುತ್ತಾರೆ. ಮೈಸೂರಿನಲ್ಲಿದ್ದ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ ದೇಬೂರಿನ ಆಸ್ತಿಯ ಮೇಲೆ ಹಾಗೂ ನಂಜನಗೂಡಿನ ಹುಲ್ಲಹಳ್ಳಿ ರಸ್ತೆಯಲ್ಲಿರುವ ಆಸ್ತಿಯ ಮೇಲೆ ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯಿಂದ ಪಡೆದಿದ್ದ ಸಾಲವನ್ನು ತೀರುವಳಿ ಮಾಡಲಾಗಿರಲಿಲ್ಲ ಎಂದರೆ ಸರಿ. ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯ ಸಾಲ ಈಗಲೂ ಸಹ ಬಾಕಿ ಇರುತ್ತದೆ ಎಂದರೆ ಸರಿ. 2009 ರಿಂದ ಇಲ್ಲಿಯವರೆವಿಗೂ ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯವರು ಪಿರ್ಯಾದಿದಾರರ ಮೇಲೆ ಯಾವುದೇ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ ಎಂದರೆ ಸರಿ. ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯವರು ಪಿರ್ಯಾದಿದಾರರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಸಂಬಂಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಆದರೆ ನೋಟಿಸ್ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

7. 2018 ರಲ್ಲಿ ನಾನು ನಂಜನಗೂಡಿನ ಹುಲ್ಲಹಳ್ಳಿ ರಸ್ತೆಯಲ್ಲಿರುವ ಆಸ್ತಿಯನ್ನು ಮಾರಾಟಕ್ಕೆ ಇಟ್ಟಿದ್ದು, ಆದರೆ ಮಾರಾಟದ ವ್ಯವಹಾರವು ತಡವಾಗಿದ್ದರಿಂದ ನಾನು ಪಿರ್ಯಾದಿದಾರರಿಂದ ರೂ.25,00,000/- ಗಳನ್ನು ಸಾಲವಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯ ಆಸ್ತಿಯನ್ನು ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯಿಂದ ಉಳಿಸಿಕೊಂಡು ಖಾಸಗಿಯವರಿಗೆ ಮಾರಾಟ ಮಾಡಿದರೆ ಹೆಚ್ಚಿನ ಹಣ ಬರುತ್ತದೆ ಎಂದು ಭಾವಿಸಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಸಮಯ ನಂಜನಗೂಡಿನ ಹುಲ್ಲಹಳ್ಳಿ ರಸ್ತೆಯಲ್ಲಿರುವ

ಆಸ್ತಿಯ ಮೌಲ್ಯ ಸುಮಾರು 5 ಕೋಟಿಗಿಂತ ಹೆಚ್ಚು ಇತ್ತು ಎಂದು ನುಡಿಯುತ್ತಾರೆ. ನಾನು ನಂಜನಗೂಡಿನ ಹುಲ್ಲಹಳ್ಳಿ ರಸ್ತೆಯಲ್ಲಿ ಇದ್ದ ಸ್ವತ್ತನ್ನು ಮಾರಾಟ ಮಾಡಲು ಸಾಧ್ಯವಾಗದೇ ಇದ್ದ ಕಾರಣ ನನಗೆ ಸೇರಿದ ಮತ್ತೊಂದು ನಿವೇಶನವನ್ನು ರೂ.25,00,000/-ಗಳಿಗೆ ಕೊಂಡುಕೊಳ್ಳುವಂತೆ ಪಿರ್ಯಾದಿದಾರರನ್ನು ಕೇಳಿದ್ದೆನು ಎಂದರೆ ಸರಿಯಲ್ಲ. ನಾನು ನೀಡಿದ ಮನವಿಗೆ ಪಿರ್ಯಾದಿದಾರರು ಒಪ್ಪದೇ ಇದ್ದುದ್ದರಿಂದ ನಾನು ಪಿರ್ಯಾದಿದಾರರಿಗೆ ನಿಪಿ-1 ರ ಚೆಕ್ಕನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನೀವು ಪಿರ್ಯಾದಿದಾರರಿಗೆ ಇಂಡಿಯನ್ ಬ್ಯಾಂಕ್ ನ 12 ಚೆಕ್ಕುಗಳು ಮತ್ತು ಐ.ಸಿ.ಐ.ಸಿ.ಐ ಬ್ಯಾಂಕಿನ 12 ಚೆಕ್ಕುಗಳನ್ನು ನೀಡಿದ್ದೀರಿ ಎಂಬುದಕ್ಕೆ ಸಂಬಂಧಿಸಿದಂತೆ ಯಾವುದಾದರೂ ದಾಖಲೆಗಳು ಇವೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಇಂಡಿಯನ್ ಬ್ಯಾಂಕಿನ ಚೆಕ್ಕುಗಳ ಹಳೆಯದ್ದಾದ್ದರಿಂದ ಸಿ.ಟಿ.ಎಸ್ ಚೆಕ್ ಬಂದ ನಂತರ ಅವುಗಳನ್ನು ವಾಪಸ್ಸು ನೀಡಿ ಐ.ಸಿ.ಐ.ಸಿ.ಐ ಬ್ಯಾಂಕಿನ 12 ಚೆಕ್ಕುಗಳನ್ನು ಪಿರ್ಯಾದಿದಾರರು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪಿರ್ಯಾದಿದಾರರಿಗೆ ನೀಡಿದ್ದ 12 ಚೆಕ್ಕುಗಳ ಪೈಕಿ 1 ಚೆಕ್ಕು ದುರುಪಯೋಗವಾಗಿದ್ದು, ಉಳಿದ 11 ಚೆಕ್ಕುಗಳನ್ನು ಹಿಂತಿರುಗಿಸುವಂತೆ ಯಾವುದೇ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ. ನಾನು ಇತರೇ ಜಾಮೀನುದಾರರಿಗೆ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಅವರು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪಿರ್ಯಾದಿದಾರರನ್ನು ಜಾಮೀನುದಾರಿಕೆಯಿಂದ ಬಿಡುಗಡೆಗೊಳಿಸಲು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ, ಆ ರೀತಿ ಬಿಡುಗಡೆಗೊಳಿಸಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ ಎಂದು ನುಡಿಯುತ್ತಾರೆ. 2009 ರಲ್ಲಿ ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯಿಂದ ಪಡೆದ ಸಾಲಕ್ಕೆ ಹೊರತುಪಡಿಸಿ 2010, 2011, 2012 ಮತ್ತು 2014 ರಲ್ಲಿ ಪಡೆದ ಸಾಲಕ್ಕೆ ಪಿರ್ಯಾದಿದಾರರು ಜಾಮೀನುದಾರರಲ್ಲ ಎಂದರೆ ಸರಿ.

8. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ನೋಟಿಸ್ ಜಾರಿಯಾದ ನಂತರ ನಾನು ಮನೆ ನಿರ್ಮಾಣ ಮಾಡಲು ಪಡೆದಿದ್ದ ಸಾಲದ ಹೊರೆ ಪಿರ್ಯಾದಿದಾರರ ಮೇಲೆ ಬರುತ್ತದೆ ಎಂಬ ಭಯದಿಂದ ನನ್ನ ವಿರುದ್ಧ ಈ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದು ನಮೂದಿಸಿದ್ದು, ಸದರಿ ವಿಚಾರವನ್ನು ನಿಮ್ಮ ಪ್ರತ್ಯುತ್ತರದ ತಿಳುವಳಿಕೆಯಲ್ಲಿ ತಿಳಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಪಿರ್ಯಾದಿದಾರರ ಬಳಿ ಇರುವ 11 ಚೆಕ್ಕುಗಳಿಗೆ ಸಂಬಂಧಿಸಿದಂತೆ ಸ್ಟಾಪ್

ಪೇಮೆಂಟ್ ಮಾಡುವ ಸಂಬಂಧ ನಾನು ಬ್ಯಾಂಕಿನವರಿಗೆ ಅರ್ಜಿ ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯಿಂದ ಸಾಲವನ್ನು ತೀರುವಳಿ ಮಾಡಿದ ನಂತರ ಪಿರ್ಯಾದಿದಾರರು ಚೆಕ್ಕುಗಳನ್ನು ನನಗೆ ವಾಪಸ್ಸು ನೀಡುತ್ತಾರೆ ಎಂದು ಬ್ಯಾಂಕಿಗೆ ನಾನು ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಪಿರ್ಯಾದಿದಾರರು ರೆಪ್ಕೋ ಹೋಂ ಫೈನಾನ್ಸ್ ಸಂಸ್ಥೆಯಿಂದ ನಾನು ಪಡೆದ ಸಾಲಕ್ಕೆ ಜಾಮೀನುದಾರರಾಗಿರುವುದರಿಂದ ಅವರಿಗೆ ಭದ್ರತೆಯ ದೃಷ್ಟಿಯಿಂದ ಚೆಕ್ಕುಗಳನ್ನು ನೀಡಿರುತ್ತೇನೆ ಎಂದು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಲೀವರ್ ತೊಂದರೆಯಿಂದ ಬಳಲುತ್ತಿದ್ದೆನು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಆಯುರ್ ವೈದ್ಯ ಚಿಕಿತ್ಸೆಯನ್ನು ಪಡೆದುಕೊಂಡಿರುವುದರಿಂದ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಒಂದು ವೇಳೆ ನ್ಯಾಯಾಲಯವು ಆದೇಶಿಸಿದ ಪಕ್ಷದಲ್ಲಿ ಹಾಜರುಪಡಿಸಲು ಸಿದ್ಧನಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ಹೊಣೆಕಾರಿಗಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ದಿ.05-11-2018 ರಂದು ನಾನು ಪಿರ್ಯಾದಿದಾರರಿಂದ ಸಾಲವಾಗಿ ಹಣ ಪಡೆದಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿ.26-12-2018 ರಂದು ಪಿರ್ಯಾದಿದಾರರಿಗೆ ಐ.ಸಿ.ಐ.ಸಿ.ಐ ಬ್ಯಾಂಕಿನ ಚೆಕ್ಕುಗಳ ನೀಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಗೆ ರೂ.25,00,000/- ಗಳನ್ನು ಸಾಲವಾಗಿ ನೀಡುವಷ್ಟು ಆರ್ಥಿಕ ಚೈತನ್ಯ ಇರುವುದಿಲ್ಲ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

9. ನನ್ನ ಪತ್ನಿಯವರ ಹೆಸರಿನಲ್ಲಿ ದೇವಿರಮ್ಮನಹಳ್ಳಿಯಲ್ಲಿ 30X40 ಅಡಿಯ ಖಾಲಿ ನಿವೇಶನ ಇದ್ದು ಈಗ ಅದನ್ನು ನಾನು ಮಾರಾಟ ಮಾಡಿರುತ್ತೇನೆ. ದೇವಿರಮ್ಮನಹಳ್ಳಿಯಲ್ಲಿ ಇದ್ದ ನಿವೇಶನವನ್ನೇ ಕೊಂಡುಕೊಳ್ಳುವಂತೆ ನಾನು ಪಿರ್ಯಾದಿದಾರರನ್ನು ಕೋರಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿವೇಶನವನ್ನು ನಾನು 2014 ರಲ್ಲಿ ನನ್ನ ಪತ್ನಿಯ ಹೆಸರಿನಲ್ಲಿ ಕ್ರಯಕ್ಕೆ ಕೊಂಡಿದ್ದೆನು ಎಂದರೆ ಸರಿ. ಸದರಿ ನಿವೇಶನವನ್ನು ಯಾವ ವರ್ಷ ಮಾರಾಟ ಮಾಡಿದೆನು ಎಂದು ನನಗೆ ಈಗ ನೆನಪಿಲ್ಲ. ಆದರೆ ಮುಂದಿನ ಮುದ್ದತಿಗೆ ನೋಡಿಕೊಂಡು ಬಂದು ಹೇಳುತ್ತೇನೆ ಎಂದು ನುಡಿಯುತ್ತಾರೆ. ಪಿರ್ಯಾದಿದಾರರು ಸಲ್ಲಿಸಿರುವ ಈ ಪಿರ್ಯಾದು ಊರ್ಜಿತವಾಗಿದ್ದು, ನಾನು

ಪಿರ್ಯಾದಿದಾರರಿಗೆ ಮರುಪಾವತಿ ಮಾಡಬೇಕಾದ ಹಣವನ್ನು ಮರುಪಾವತಿ ಮಾಡದೇ ಅವರಿಗೆ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**